ಮೀನುಗಾರಿಕೆ ಬಂದರುಗಳ ನಿರ್ಮಾಣ.

355(2327) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಈ ಮೀನುಗಾರಿಕೆ ಬಂದರನ್ನು ಮಾಡಲು ನಬಾರ್ಡ್‌ನಿಂದ ಸಾಲ ಸೌಲಭ್ಯ ಪಡೆಯುವ ಯೋಜನೆ ಇದೆಯೇ; ಇದ್ದಲ್ಲಿ, ಅದು ಈಗ ಯಾವ ಹಂತದಲ್ಲಿ ಇದೆ?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :—

ಅ) ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ಗಂಗೊಳ್ಳಿಯಲ್ಲಿ ರೂ.832 ಲಕ್ಷ ಅಂದಾಜು ವೆಚ್ಚದಲ್ಲಿ ಮೀನುಗಾರಿಕಾ ಬಂದರು ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಅಲ್ಲದೆ ಕೋಡೇರಿ ಮತ್ತು ಹಂಗಾರಕಟ್ಟೆ ತಂಗುದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಮಂಗಳೂರು ಮತ್ತು ಕಾರವಾರ ಮೀನುಗಾರಿಕೆ ಬಂದರುಗಳ ವಿಸ್ತರಣೆಗಳನ್ನು ಪ್ರಸ್ತಾಪಿಸಲಾಗಿದೆ.

ಆ) ಹೌದು. ಗಂಗೊಳ್ಳಿ, ಹಂಗಾರಕಟ್ಟೆ ಮತ್ತು ಕೋಡೇರಿ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ನಬಾರ್ಡ್ ಸಂಸ್ಥೆಯಿಂದ ಸಾಲವನ್ನು ಪಡೆಯಲು ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು) :— ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಇಲ್ಲೇ ಮಾಡಿದಾಗ, ನಾನು ಅವರ ಸಿಎಂಡಿ ಬಂದಾಗ ಚರ್ಚೆ ಮಾಡಿ ಕೊನೆಗೆ ಅವರು ಕೊಡಲಿಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಆ ಬಗ್ಗೆ ಒಂದು ಒಪ್ಪಿಗೆ ಪತ್ರವನ್ನು ಸಹಾ ಕೊಟ್ಟಿದ್ದಾರೆ. ನಾವು ಈಗಾಗಲೇ ಎಸ್ಟಿಮೇಟನ್ನು ಮಾಡಿಸಿ ಅವರಿಗೆ ಕಳುಹಿಸಿದ್ದೇನೆ.

Hon'ble Speaker :— You have anticipated this question...!

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:— ಮಾನ್ಯ ಅಧ್ಯಕ್ಷರೇ, ಅಂಟಿಸಿಪೇಷನ್ ಇದೆ ಎಂದು ಹೇಳುವುದಾದರೆ ಉತ್ತರ ಬರಲಿಲ್ಲ.

ಅಧ್ಯಕ್ಷರು:— ನಿಮ್ಮ ಮಧ್ಯೆ ಈ ಒಂದು ಸಹಕಾರ ಇರುವುದನ್ನು ನಾವು ಅಭಿನಂದಿಸುತ್ತೇವೆ.

ತಡೆಹಿಡಿಯಲಾದ ಪ್ರಶ್ನೆ.

ಹಾಸನದ ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ನೇಮಕಾತಿ

339(2177) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನವರು ಇತ್ತೀಚೆಗೆ ನೇಮಕ ಮಾಡಿಕೊಂಡ ಕಿರಿಯ ಸಹಾಯಕರ ಸಂಖ್ಯೆ ಎಷ್ಟು?

ಆ) ಕಿರಿಯ ಸಹಾಯಕರ ಆಯ್ಕೆ ಪಟ್ಟಿಯನ್ನು ಪ್ರಕಟಿಸದೆ ಒಬ್ಬೊಬ್ಬರಿಗೆ ನೇಮಕಾತಿ ಆದೇಶಕೊಟ್ಟು ಕರ್ತವ್ಯಕ್ಕೆ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಎಷ್ಟು 'ಡಿ' ಗ್ರೂಪ್ ನೌಕರರನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು? ಮತ್ತು 'ಡಿ' ಗ್ರೂಪ್ ಹುದ್ದೆಗೆ ಸಂದರ್ಶನಕ್ಕೆ ಕರೆದವರ ಸಂಖ್ಯೆ ಎಷ್ಟು?

ಈ) ಆಯ್ಕೆಗೊಂಡ 'ಡಿ' ಗ್ರೂಪ್ ನೌಕರರ ಪಟ್ಟಿಯನ್ನು ಪ್ರಕಟಿಸಲಾಗಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):—

ಅ) 43

ಆ) ಇಲ್ಲ

ಇ) 14 'ಡಿ' ಗ್ರೂಪ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿತ್ತು. ಒಟ್ಟು 1504 ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ನೀಡಲಾಗಿತ್ತು.

ಈ) ಹೌದು

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದೆ. ಆ ಉತ್ತರವನ್ನು ಬಹುಶ: ತಾವೇ ತಡೆಹಿಡಿದಿದ್ದಿರಿ.

ಅಧ್ಯಕ್ಷರು:— ಆ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದೀರಾ ಇಲ್ಲವೇ ಎಂದು ಹೇಳಿಬಿಡಿ; ಮತ್ತೆ ಆ ಬಗ್ಗೆ ಟೈಮ್ ಏಕೆ ವೇಸ್ಟ್ ಮಾಡುವುದು?

ಶ್ರೀ ಎಸ್.ಎಸ್. ಪಾಟೀಲ್:— ಅದನ್ನು ಮೂರು ಪೇಪರ್‌ನಲ್ಲಿ ಪ್ರಕಟಿಸಿ ಕಾಲ್‌ಫರ್ ಮಾಡಿದ್ದಾರೆ; ಅಲ್ಲಿ ಪ್ರಜಾವಾಣಿ ಮತ್ತು ಬೇರೆ ಎರಡು ಲೋಕಲ್